## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. 13/2014**

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| ಹೆಸರು | ಸೋಮಶೇಖರಪ್ಪ | ಪ್ರಾಸಾಃ**2** |
| ತಂದೆಯ ಹೆಸರು | ವೀರೂಪಾಕ್ಷಪ್ಪ | |
| ವಯಸ್ಸು | 62 ವರ್ಷ | |
| ವೃತ್ತಿ | ವ್ಯವಸಾಯ | |
| ವಾಸಸ್ಥಳ | ನ್ಯಾಮತಿ | |

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **299** ರಡಿಯಲ್ಲಿ ಸಾಕ್ಷ್ಯ ವಿಚಾರಣೆ

ದಿನಾಂಕಃ **20.06.2022** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :- ಮಾನ್ಯ ಸ.ಸ.ಅ. ರವರಿಂದಃ

ದಿಃ 10-02-2004 ರಂದು ಮೈಸೂರಿನ ಜಿ ಕೆ ಎಂಟರ್ ಪ್ರೈಸಸ್ ಟ್ರೇಡರ್ ರವರು 12 ಟನ್ ಅಕ್ಕಿ ಕಳುಹಿಸಿಕೊಡುವಂತೆ ಪೋನ್ ಮೂಲಕ ಒಪ್ಪಂದ ಮಾಡಿಕೊಂಡು . ಆ ಮೇರೆಗೆ ನಾನು ದಿಃ 11-02-2004 ರಂದು ಲಾರಿ ಸಂಖ್ಯೆ ಕೆ ಎ 12 ಎ 5493 ರಲ್ಲಿ ಕಳುಹಿಸಿಕೊಟ್ಟಿದ್ದು, ಸದರಿ ಲಾರಿಯನ್ನು ಆರೋಪಿಯು ಚಲಾಯಿಸುತ್ತಿದ್ದು , 12 ಟನ್ ಅಕ್ಕಿಯ ಪೈಕ್ 5 ಟನ್ ಜಿ ಕೆ ಎಂಟರ್ ಪ್ರೈಸಸ್ ಗೆ 7 ಟನ್ ಯುನಿಯನ್ ಟ್ರೇಡರ್ ಗೆ ತಲುಪಿಸುವಂತೆ ಕಾಗದ ಪತ್ರ ಗಳನ್ನು ತಯಾರು ಮಾಡಿ ಆರೋಪಿಗೆ ಕೊಟ್ಟು, ಕಳುಹಿಸಿರುತ್ತೇನೆ. ದಿಃ 14-02-2004 ರಂದು ಮಾಲೀಕರು ಪೋನ್ ಮಾಡಿ ಅಕ್ಕಿ ಬಂದಿಲ್ಲವೆಂದು ತಿಳಿಸಿರುತ್ತಾರೆ. ನಂತರ ದಿಃ 15-02-2004 ರಂದು ಮಹದೇಶ್ವರ ಟ್ರನ್ಸ್ ಪ್ರೋಟ್ ಗೆ ಹೋಗಿ ವಿಚಾರಿಸಿದಾಗ ಆರೋಪಿಯ ಪೋನ್ ನಂಬರ್ ಸ್ವಿಚ್ ಆಫ್ ಆಗಿದೆ ಎಂದು ತಿಳಿಸಿರುತ್ತಾರೆ. ನಂತರ ಲಾರಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಸಿಗದೆ ಇದುದ್ದರಿಂದ ನಾನು ದೂರನ್ನು ದಾಖಲಿಸಿರುತ್ತೇನೆ.

ದೂರಿನ ಧೃಡೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ದಿಃ 22-02-2004 ರಂದು ಪೊಲೀಸರು ಮಿಲ್ ಬಳಿ ಬಂದು ಪಂಚರ ಸಮಕ್ಷಮ ಮಹಜರ್ ನ್ನು ತಯಾರಿಸಿರುತ್ತಾರೆ. ಸದರಿ ಮಹಜರ್ ನ ಧೃಡೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ನಿಪಿ-9 ಎಂದು ಗುರುತಿಸಲಾಯಿತು.

ಆರೋಪಿಯು ತಲೆಮರಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., **ಹೊನ್ನಾಳಿ.**